SMT. MUKTHARUNNISA.— They are unauthorised constructions, I agree But when those houses were constructed, what were your Corporation Officers doing ? Your Corporation was there, your revenue people were there and what were they doing ? What action you have taken against those officials ?

SRI A. LAKSHMISAGAR.— Sir, action have been taken.

ಶ್ರೀ ವೇದಾಂತ ಹೆಬ್ಬಿಗೆ.— ಕಾಂಗ್ರೆಸ್ ಸರ್ಕಾರ ಇದ್ದಾಗ ಬಂದಂತಹ ಅನಧಿಕೃತ ಕಟ್ಟಡಗಳನ್ನು ರೆಗ್ಯುಲರೈಸ್ ಮಾಡುತ್ತೀರಾ ? ಜನತಾ ಸರ್ಕಾರ ಬಂದ ಮೇಲೆ ಬಂದಂತಹ ಅನಧಿಕೃತ ಕಟ್ಟಡಗಳನ್ನು ಕೂಡಾ ರೆಗ್ಯುಲರೈಸ್ ಮಾಡುತ್ತೀರಾ ? ಯಾವುದನ್ನು ಮಾಡುತ್ತೀರಿ ?

SRI A. LAKSHMISAGAR—Sir, the matter is under the consideration of the Government.

ಮಧ್ಯಮ ಮತ್ತು ಬೃಹತ್ ಕೈಗಾರಿಕೆಗಳನ್ನು ಹರಿಹರ ತಾಲ್ಲೂಕಿನಲ್ಲಿ ಪ್ರಾರಂಭಿಸಿರುವ ಬಗ್ಗೆ

೩೮೭. ಶ್ರೀ ಬಿ. ಜಿ. ಕೊಟ್ರಪ್ಪ (ಹರಿಹರ).— ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹರಿಹರ ತಾಲ್ಲೂಕಿನಲ್ಲಿ ದೊಡ್ಡ ಕೈಗಾರಿಕಾ ಘಟಕವನ್ನು ಪ್ರಾರಂಭಿಸಲು ಸರ್ಕಾರದವರು ಕ್ರಮಕೈಕೊಳ್ಳುವರೇ ?

ಶ್ರೀ ಜೆ. ಹೆಚ್. ಪಟೇಲ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು).—

ಅ) ಸಧ್ಯಕ್ಕೆ ಸರ್ಕಾರದ ಮುಂದೆ ಯಾವ ತರಹದ ಪ್ರಸ್ತಾಪವೂ ಇರುವುದಿಲ್ಲ.

ಶ್ರೀ ಬಿ. ಜಿ. ಕೊಟ್ರಪ್ಪ,—ಹರಿಹರ ಪಟ್ಟಣದ ಹತ್ತಿರ ನೀರಿನ ಅನುಕೂಲ ಇದ್ದು, ಪಾಲಿಫೈಬರ್ ನವರು ಹೆಚ್ಚಿಗೆ ಲಾಭ ಮಾಡಿದ್ದಾರೆ, ಬೇರೆ ಕಡೆಯಿಂದ ಬಂದಂತಹವರು ಲಾಭ ಮಾಡುತ್ತಿದ್ದಾರೆ, ಅಂತಹ ಅನುಕೂಲ ಅಲ್ಲಿದೆ ಅಂತಹ ಜಾಗದಲ್ಲಿ ಸರ್ಕಾರದವರು ಇದುವರೆವಿಗೂ ಯಾವ ಕಾರ್ಖಾನೆಯನ್ನೂ ಮಾಡಿಲ್ಲ. ಆ ರೀತಿ ಕಾರ್ಖಾನೆಯನ್ನು ಮಾಡಿದರೆ, ನಮ್ಮ ಜನರಿಗೆ ನೌಕರಿ ಸಿಕ್ಕುತ್ತದೆ, ಆ ಉದ್ದೇಶದಿಂದ ದಾವಣಗೆರೆ ಹಾಗೂ ಹರಿಹರ ಪಟ್ಟಣಗಳ ನಡುವೆ ಒಂದು ದೊಡ್ಡ ಕಾರ್ಖಾನೆಯನ್ನು ಸರ್ಕಾರದ ವತಿಯಿಂದಲೇ ಮಾಡುವುದಕ್ಕೆ ಯೋಜನೆಯನ್ನು ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಸದಸ್ಯರ ಕಳಕಳಿಯನ್ನು ನಾನು ಅರ್ಥಮಾಡಿಕೊಂಡಿದ್ದೇನೆ ಈಗಾಗಲೇ ಹರಿಹರ ಪಟ್ಟಣದ ಸುತ್ತ ಮುತ್ತ ೪೫ ದೊಡ್ಡ ಕಾರ್ಖಾನೆಗಳು ಬಂದಿವೆ. ಹರಿಹರ ದಾವಣಗೆರೆ ಪಟ್ಟಣಗಳ ನಡುವೆ ಕಾರ್ಖಾನೆಯೊಂದನ್ನು ಸರ್ಕಾರದ ವತಿಯಿಂದ ಪ್ರಾರಂಭ ಮಾಡಬೇಕೆಂದು ಮಾನ್ಯ ಸದಸ್ಯರು ಸಲಹೆ ನೀಡಿದ್ದಾರೆ. ಈಗ ಸಧ್ಯಕ್ಕೆ ಆ ಯೋಜನೆ ಇಲ್ಲ. ಆದರೆ ಯಾರಾದರೂ ಖಾಸಗಿಯವರು ಅಲ್ಲಿನ ಮಾಲಿನ್ಯತೆಗೆ ಧಕ್ಕೆ ಬಾರದ ರೀತಿಯಲ್ಲಿ ತೆಚ್ಚು ವಿದ್ಯುಚ್ಛಕ್ತಿಯನ್ನು ಅವಲಂಬಿಸದೆ ಜನರಿಗೆ ಕೆಲಸವನ್ನು ಕೊಡತಕ್ಕಂತಹ ಲೇಬರ್ ಓರಿಯಂಟೆಡ್ ಕೈಗಾರಿಕೆಯನ್ನು ಮಾಡಿಂತ್ತೇವೆಂದು ಮುಂದೆ ಬಂದರೆ ಸರ್ಕಾರ ಅವರಿಗೆ ಪ್ರೋತ್ಸಾಪ ನೀಡುತ್ತದೆ.

ಲೋಕ ಸೇವಾ ಆಯೋಗ ಹಾಗೂ ಉದ್ಯೋಗ ವಿನಿಮಯ ಕೇಂದ್ರಗಳ ಪಾತ್ರ

೭೪೧. ಶ್ರೀ ಐ. ಬಿ. ಶಂಕರ್ (ಚಿಕ್ಕಮಗಳೂರು).—ಮಾನ್ಯ ಕಾರ್ಮಿಕ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಲೋಕಸೇವಾ ಆಯೋಗವು ಉದ್ಯೋಗ ನೀಡುವುದರಲ್ಲಿ ಪ್ರಾಮುಖ್ಯತೆ ಪಡೆದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಜಿಲ್ಲೆಯ ಉದ್ಯೋಗ ವಿನಿಮಯ ಕೇಂದ್ರಗಳ ಕೆಲಸ ಕಾರ್ಯಗಳ ನಿರ್ವಹಣೆ ಏನು?

ಶ್ರೀ ಡಿ. ಮಂಜುನಾಥ್ (ಕಾರ್ಮಿಕ ಸಚಿವರು).—

ಅ) ಹೌದು.

ಆ) ಆ) ನಿರುದ್ಯೋಗಿ ವಿದ್ಯಾವಂತರ ಹೆಸರುಗಳನ್ನು ನೋಂದಾಯಿಸುವುದು.

ಆ) ಸರ್ಕಾರಿ ಪಲಯ, ಖಾಸಗಿ ಪಲಯಗಳಲ್ಲಿ, ಅರೆಸರ್ಕಾರಿ, ರಾಜ್ಯ ಮತ್ತು ಕೇಂದ್ರ ಸರ್ಕಾರದ ವಲಯಗಳಲ್ಲಿ ಕಾರ್ಖಾನೆ ಉದ್ದಿಮೆ, ಸಂಸ್ಥೆ. ಮುಂತಾದುವುಗಳಲ್ಲಿ ಹುದ್ದೆಗಳ ವಿವರಗಳನ್ನು ಪಡೆದು ಅವುಗಳಿಗೆ ಅರ್ಹ ನೋಂದಾಯಿತರ ಹೆಸರುಗಳನ್ನು ಸೂಚಿಸುವುದು, ಇತ್ಯಾದಿ.

ಶ್ರೀ ಐ. ಬಿ. ಶಂಕರ್.—ಮಾನ್ಯ ಮಂತ್ರಿಗಳಲ್ಲಿ ಕೇಳುವುದೇನೆಂದರೆ, ನೋಂದಣಿ ಮಾಡಿಸಿರುವಂತಹ ನಿರುದ್ಯೋಗಿಗಳ ವಯಸ್ಸು ಮೀರಿ ಹೋಗುತ್ತಾ ಇದೆ. ನೀವು ಸೀನಿಯಾರಿಟಿ ಮಾಡುತ್ತಾ, ಕುಳಿತರೆ ಸರ್ಕಾರ ನಿಗದಿ ಮಾಡಿರುವಂತಹ ವಯೋಮಿತಿ ಮೀರಿ ಹೋಗುತ್ತದೆ, ಅಂತಹವರಿಗೆ ತಾವು ಪ್ರಾತಿನಿಧ್ಯವನ್ನು ಏಕೆ ಕೊಡಬಾರದು?

ಶ್ರೀ ಡಿ. ಮಂಜುನಾಥ್.—ಇದು ಏನಾಗಿದೆ ಎಂದರೆ, ಈಗ ಉದ್ಯೋಗ ವಿನಿಮಯ ಕೇಂದ್ರದಿಂದ ಬರೀ ಕ್ಲಾಸ್–೪ ಸರ್ವೆಂಟ್ಸ್‌ಗಳಿಗಾಗಿ ಕೇಳುತ್ತಾರೆ. ಜೊತೆಗೆ ನೇಮಕಾತಿ ಸಮಿತಿಗಳು ಬೇಕಾದಷ್ಟು ಆಗಿವೆ. ಆದರ ಜೊತೆಗೆ ಲೋಕ ಸೇವಾ ಆಯೋಗದವರು ಎ.ಬಿ.ಸಿ. ದರ್ಜೆಯ ನೇಮಕಾತಿಗಳನ್ನು ಮಾಡುತ್ತಾರೆ. ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ ಅದು ನಿಜ. ೭–೮ ವರ್ಷಗಳಾದರೂ ನೋಂದಣಿ ಮಾಡಿಸಿದಂತಹವರಿಗೆ ಇಂಟರ್‌ವ್ಯೂ ಬರುವುದಿಲ್ಲವೆಂದು ಹೇಳಿದ್ದಾರೆ. ಬರೀ ಕ್ಲಾಸ್–೪ಗೆ ಮಾತ್ರ ಇಲಾಖೆಯವರು ಕೇಳುತ್ತಿರುವುದರಿಂದ ಈ ರೀತಿಯಾಗಿರುವುದಕ್ಕೆ ಸಾಧ್ಯವಾಗಿದೆ.

ಶ್ರೀ ಐ. ಬಿ. ಶಂಕರ್.—ಹೆಚ್ಚು ವಯಸ್ಸು ಆದಂತಹವರಿಗೆ ಆದ್ಯತೆಯನ್ನು ಕೊಟ್ಟು ಅವರಿಗೆ ಇಂಟರ್‌ವ್ಯೂವನ್ನು ಕೊಡಿಸುವಂತಹ ಕೆಲಸವನ್ನು ತಾವು ಏಕೆ ಮಾಡಬಾರದು?

ಶ್ರೀ ಡಿ. ಮಂಜುನಾಥ್.—ಕ್ಲಾಸ್–೪ ಹುದ್ದೆಗಳಿಗೆ ಉದ್ಯೋಗ ವಿನಿಮಯ ಕೇಂದ್ರವನ್ನೇ ಕೇಳ ಬೇಕೆಂದು ಕಡ್ಡಾಯ ಮಾಡುತ್ತೇವೆ. ಮತ್ತೆ ನೋಂದಣಿ ಮಾಡಿಸಿರುವವರಲ್ಲಿ ಸೀನಿಯಾರಿಟಿ ಆಧಾರದ ಮೇಲೆ ಇಂಟರ್‌ವ್ಯೂಗೆ ಕಳುಹಿಸುತ್ತಿದ್ದೇವೆ.

ರಾಜ್ಯದಲ್ಲಿರುವ ಆಟೋರಿಕ್ಷಾಗಳು

೫೭೯. ಶ್ರೀ ಆರ್. ಎನ್. ನಾಯ್ಕ (ಭಟ್ಕಳ್).—ಮಾನ್ಯ ಸಾರಿಗೆ ಮತ್ತು ರಾಜ್ಯ ಸಚಿವರು ಈ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಈಗ ಎಷ್ಟು ಆಟೋರಿಕ್ಷಾಗಳು ಓಡುತ್ತಿವೆ, ಹಾಗೂ ಆ ಪೈಕಿ ಬೆಂಗಳೂರಿನಲ್ಲಿ ಓಡುತ್ತಿರುವ ಆಟೋರಿಕ್ಷಾಗಳ ಸಂಖ್ಯೆ ಎಷ್ಟು?

ಆ) ಮೀಟರ್ ಅಳವಡಿಸದೆ ಓಡಿಸಲ್ಪಡುವ ಆಟೋರಿಕ್ಷಾಗಳ ಸಂಖ್ಯೆ ಎಷ್ಟು?

ಇ) ಎಲ್ಲಾ ಆಟೋರಿಕ್ಷಾಗಳಿಗೆ ಮೀಟರ್ ಅಳವಡಿಸಲು ಸರ್ಕಾರದವರು ಉದ್ದೇಶಿಸಿದ್ದಾರೆಯೆ, ಹಾಗೂ ಆ ಬಗ್ಗೆ ಸಂಬಂಧಪಟ್ಟ ಮಂತ್ರಿಗಳು ಹೇಳಿಕೆ ಏನಾದರೂ ಕೊಟ್ಟಿದ್ದಾರೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಮತ್ತು ಪಸತಿ ರಾಜ್ಯ ಸಚಿವರು).—

ಅ) ದಿನಾಂಕ ೩೧–೧೨–೮೫ ರಂದು.

ರಾಜ್ಯದಲ್ಲಿ	೨೬,೪೪೯
ಬೆಂಗಳೂರಿನಲ್ಲಿ	೧೦,೫೪೭

ಆ) ಇಲ್ಲ.

ಇ) ೧) ಆಟೋರಿಕ್ಷಾಗಳಿಗೆ ದರ ಸೂಚಿ ಮೀಟರನ್ನು ಅಳವಡಿಸುವುದು ಕರ್ನಾಟಕ ಮೋಟಾರು ವಾಹನ ನಿಯಮಾವಳಿಗಳು ೧೯೬೩ರ ಪ್ರಕಾರ ಕಡ್ಡಾಯವಾಗಿರುತ್ತದೆ.